**SC No. 257/2021**
**PW-14**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 257/2021

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀಧರ ಎಸ್. | ಪ್ರಮಾಣ ವಚನ ಮಾಡಿದ ದಿನಾಂಕ: 01.12.2025 |
| ತಂದೆಯ/ಗಂಡನ ಹೆಸರು | ಸಿದ್ದರಾಜು ಆರ್. | |
| ವಯಸ್ಸು | 49 ವರ್ಷ | |
| ವೃತ್ತಿ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಜ್ಯೋತಿನಗರ | ಪ್ರಾ.ಸಾಃ 14 |
| ವಾಸ ಸ್ಥಳ | ಮೈಸೂರು | ಚಾ.ಸಾಃ 14 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು *2021* ರಿಂದ *2022* ರವರೆಗೆ ಚಾಮುಂಡಿಪುರಂ ಸಬ್ ಡಿವಿಶನ್ ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ಪೊಲೀಸ್ ಇನ್ಸ್ ಪೆಕ್ಟರ್ ಕೃಷ್ಣ ರಾಜ ಪೊಲೀಸ್ ಠಾಣೆಯವರು ಅವರ ಠಾಣಾ ಮೊ.ಸಂಖ್ಯೆ *97/2020* ಪ್ರಕರಣದಲ್ಲಿ ಕೆ.ಆರ್. ಮೊಹಲ್ಲಾದ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗದ ಎಂ.ಜಿ ರಸ್ತೆಯಲ್ಲಿ ದಿನಾಂಕ *04.09.2020* ರಂದು ರಾತ್ರಿ *10.00* ಗಂಟೆಯಿಂದ ಮಧ್ಯ ರಾತ್ರಿ *2.00* ಗಂಟೆಯವರೆಗೆ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ಮಾಹಿತಿ ಕೋರಿದ್ದು ನಾನು ಸ್ಥಳ ದಲ್ಲಿ *66/11* ***KVMUSS*** ನಿಂದ ಹೊರಹೊಮ್ಮುವ ಅಗ್ರಾಹರ ಫೀಡರ್ ನ ಗಿರೀಶ್ ಪರಿವರ್ತಕದ ಸಂಖ್ಯೆ *(114* ***A*** *28 ) 250* ***KVA*** ಇಂದ ವಿದ್ಯುತ್ ಸರಬರಾಜು ಗೊಂಡಿದ್ದು ನಿರಂತರ ವಿದ್ಯುತ್

ಸರಬರಾಜು ಗೊಂಡಿರುತ್ತದೆ ಎಂದು ಹೇಳಿ ಮಾಹಿತಿ ಕೊಟ್ಟಿದ್ದೆ. ಆ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. *14* ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ. *14(ಎ)* ಎಂದು ಗುರುತಿಸಲಾಯಿತು. ನಾನು ಲಾಗ್ ಬುಕ್ ಆಧಾರದ ಮೇಲೆ ಮತ್ತು ಗಿರೀಶ್ ರವರು ಕೊಟ್ಟಂತಹ ವರದಿ ಆಧಾರದ ಮೇಲೆ ನಿಪಿ-*14* ಅನ್ನು ಕೊಟ್ಟಿದ್ದೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>** :

ಪೊಲೀಸರಿಂದ ನೇರವಾಗಿ ನನಗೆ ಪತ್ರ ಬಂದಿತ್ತು. ನಾನು ನಿಪಿ-14 ಅನ್ನು ನಮ್ಮ ಸೆಕ್ಷನ್ ಆಫೀಸರ್ ರವರ ವರದಿಯ ಆಧಾರದ ಮೇಲೆ ಕೊಟ್ಟಿರುತ್ತೇನೆ. ನಾನು ನಿಪಿ-14 ಅನ್ನು ಯಾವ ಸ್ಥಳ ಕ್ಕೆ ಸಂಬಂಧಿಸಿದಂತೆ ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ಮಾಹಿತಿ ಇರುತ್ತದೆ. ಆ ಸ್ಥಳ ದಲ್ಲಿ ಎಷ್ಟು ವಿದ್ಯುತ್ ಚಕ್ತಿ ಕಂಬಗಳು ಇದ್ದವು ಮತ್ತು ಆ ಕಂಬಗಳಲ್ಲಿ ಇದ್ದಂತಹ ಲೈಟುಗಳು ಚಾಲ್ತಿಯಲ್ಲಿ ಇದ್ದವೋ ಇಲ್ಲವೋ ಅಂದರೆ ಲೈಟಿನ ಕಂಬಗಳು ನಮ್ಮ ವ್ಯಾಪ್ತಿಗೆ ಬರುತ್ತಿದ್ದು ಕಂಬಗಳಲ್ಲಿ ಇದ್ದಂತಹ ಲೈಟುಗಳು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ನನಗೆ ವರದಿಯನ್ನು ಕೊಟ್ಟಿದ್ದರು ಎಂದು ಹೇಳುವ ವರದಿಯಲ್ಲಿ ಲೈಟಿನ ಕಂಬದಲ್ಲಿ ಇದ್ದಂತಹ ಲೈಟುಗಳು ಚಾಲ್ತಿಯಲ್ಲಿ ಇದ್ದವೋ ಅಥವಾ ಇಲ್ಲವೋ ಎನ್ನುವ ಬಗ್ಗೆ ವರದಿ ಕೊಟ್ಟಿರಲಿಲ್ಲ. ನಿಪಿ-14 ರಲ್ಲಿ ದಿನಾಂಕ 04 ಮತ್ತು ಇಸವಿ 2020 ಎಂದು ಹೇಳಿದ್ದು ತಿಂಗಳು ಹೇಳಿರುವುದಿಲ್ಲ ಎಂದರೆ ಸರಿ. ನಾನು ನಿಪಿ-14 ಅನ್ನು ಡ್ರಾಫ್ ಹಾಕಿಕೊಟ್ಟಿದ್ದೆ ನಮ್ಮ ಕಛೇರಿಯಲ್ಲಿ ಬೆರಳಚ್ಚು ಮಾಡಿಕೊಟ್ಟಿದ್ದರು. ಅಗ್ರಹಾರ ದ ಪೂರ್ಣ ವ್ಯಾಪ್ತಿ ಸಹಾಯಕ

ಇಂಜಿನಿಯರ್ ಮಂಜು ರವರ ವ್ಯಾಪ್ತಿಗೆ ಬರುತ್ತಿತ್ತು. ನಾನು ಸರಿಯಾಗಿ ಪರಿಶೀಲನೆ ಮಾಡದೇ ನಿಪಿ-14 ಅನ್ನು ಪೊಲೀಸರ ಕೋರಿಕೆಯ ಮೇರೆಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**